ಸಿಎಂಎಸ್‌ಎಂಟಿಡಿಪಿ ಅನುದಾನ ಹಾಗೂ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳಿಂದ ಕೈಗೊಳ್ಳಲಾಗುತ್ತಿದೆ.

ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸುವುದು

342 (544) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :– ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯನ್ನು ಒಳಚರಂಡಿ ಯೋಜನೆಯಡಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿದೆಯೇ ;

ಆ) ಚಿಕ್ಕನಾಯಕನಹಳ್ಳಿ ಪಟ್ಟಣವನ್ನು ಒಳಚರಂಡಿ (ಯುಜಿಡಿ) ಯೋಜನೆಯಡಿ ಸೇರಿಸಿದ್ದಲ್ಲಿ, ಯೋಜನಾ ಅನುಷ್ಠಾನಗೊಳಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):–

ಅ) ಚಿಕ್ಕನಾಯಕನಹಳ್ಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಮಂಡಳಿಯು ಸರ್ವೆ ಕಾರ್ಯ ಕೈಗೊಂಡು ವಿವರವಾದ ಅಂದಾಜನ್ನು ರೂ. 30.00 ಕೋಟಿಗಳಲ್ಲಿ ತಯಾರಿಸಿದೆ. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಮಂಡಳಿಯು ಸಲ್ಲಿಸಬೇಕಾಗಿದೆ.

ಆ) ಸದರಿ ಪ್ರಸ್ತಾವನೆಯನ್ನು ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿದ ನಂತರ ಯೋಜನೆಯನ್ನು ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಹಣಕಾಸಿನ ಲಭ್ಯತೆಯ ಮೇಲೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸೂಕ್ತ ಕ್ರಮ ವಹಿಸಲಾಗುವುದು.

ತೋಟಗಾರಿಕೆ ಇಲಾಖೆಯ ಯೋಜನೆಗಳು

343 (545) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :– ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ;

ಆ) ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ (ಯೋಜನೆವಾರು ಮಾಹಿತಿ ಒದಗಿಸುವುದು) ;

ಇ) 2008 ರಿಂದ 2011 ರವರೆಗೆ ಎಷ್ಟು ಜನ ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ (ಯೋಜನೆವಾರು, ಫಲಾನುಭಾವಿಗಳ ವಿವರದೊಂದಿಗೆ ಮಾಹಿತಿ ನೀಡುವುದು) ?

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):–

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ಅನುಷ್ಠಾನಗೊಳಿಸಲಾದ ಯೋಜನೆಗಳ ವಿವರಗಳು ಈ ಕೆಳಕಂಡಂತಿದೆ.

1. ರಾಷ್ಟ್ರೀಯ ತೋಟಗಾರಿಕೆ ಮಿಷನ್.

2. ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ.

3. ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ.

4. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ/ ಅಭಿವೃದ್ಧಿಯ ಸಮಗ್ರ ಬೇಸಾಯದ ಯೋಜನೆ.

5. ಅಡಿಕೆ ಸಂಶೋಧನಾ ಕೇಂದ್ರ – ಶೃಂಗೇರಿ.

6. ಮಾವು ಅಭಿವೃದ್ಧಿ ಮಂಡಳಿ.

7. ತೋಟಗಾರಿಕೆಯಲ್ಲಿ ಯಾಂತ್ರೀಕರಣ.

8. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ.

9. ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ.

10. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ.

11. ತೋಟಗಾರಿಕೆ ಅಭಿವೃದ್ಧಿಗಾಗಿ ಹೊಸ ಅನುಶೋಧನೆಗಳು (ಸುವರ್ಣ ಭೂಮಿ ಯೋಜನೆ)

12. ಅಂತರರಾಷ್ಟ್ರೀಯ ಕೃಷಿ ವ್ಯಾಪಾರ ಮೇಳ.

13. ದ್ರಾಕ್ಷಾ ರಸ ನೀತಿ.

14. ಆಲೂಗಡ್ಡೆ ಬೆಳೆಗಾಗಿ ಕರ್ನಾಟಕ ತೋಟಗಾರಕಾ ಅಭಿವೃದ್ಧಿ ಸಂಸ್ಥೆಯ ಮೂಲಕ ಮಧ್ಯಸ್ಥಿಕೆ ಯೋಜನೆ.

15. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ತೋಟಗಾರಿಕೆ.

16. ತೋಟಗಾರಿಕೆ ಸಲಹಾ ಕೇಂದ್ರ ಮತ್ತು ಹಾರ್ಟಿ ಕ್ಲಿನಿಕ್.

17 ಕ.ತೋ.ಸಂ.ಸಂ.ದ. ಮುಖಾಂತರ ತೋಟಗಾರಿಕೆ ಉತ್ಪನ್ನಗಳಿಗೆ ಸಮಗ್ರ ಮಾರುಕಟ್ಟೆ ಸೌಲಭ್ಯಗಳ ಸ್ಥಾಪನೆ.

18. ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ.

19. ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ.

20. ರಾಷ್ಟ್ರೀಯ ಔಷಧಿ ಬೆಳೆ ಮಿಷನ್.

21. ತೋಟಗಾರಿಕೆ ಕಟ್ಟಡಗಳು.

22. ನಿರ್ದೇಶನ ಮತ್ತು ಆಡಳಿತ.

23. ವಿಶೇಷ ಘಟಕ ಯೋಜನೆ.

24. ವಿಸ್ತರಣೆ ಮತ್ತು ತರಬೇತಿ.

25. ತೋಟಗಾರಿಕೆಯಲ್ಲಿ ಸಂಸ್ಕರಣೆ.

26. ದೊಡ್ಡಸಾಗರೆ ತೋಟಗಾರಿಕಾ ಕ್ಷೇತ್ರದಲ್ಲಿ ಸಸ್ಯಸಂರಕ್ಷಣೆ ಮತ್ತು ಅಭಿವೃದ್ಧಿ ಕೇಂದ್ರ.

27. ಕೋಲಾರ ತೋಟಗಾರಿಕೆ ಕಾಲೇಜು.

28. ತೋಟಗಾರಿಕೆ ಉದ್ಯಾನವನಗಳ ಅಭಿವೃದ್ಧಿ.

29 ಬೀದರ್ ತೋಟಗಾರಿಕೆ ಕಾಲೇಜು.

30. ವಿಧಾನಸೌಧ ಉದ್ಯಾನವನ.

31. ಅಡಿಕೆ ಸಿಪ್ಪೆ ಸುಲಿಯುವ ಆಧುನಿಕ ಯಂತ್ರಗಳು.

32. ಜೇನು ಕೃಷಿ ಚಟುವಟಿಕೆ.

33. ದಾಳಿಂಬೆ ಬೆಳೆಯಲ್ಲಿ ಬ್ಯಾಕ್ಟೀರಿಯಾ ತೊಂದರೆ ಮೇಲೆ ಉನ್ನತ ಸಂಶೋಧನೆ.

34. ತೋಟಗಾರಿಕೆಯಲ್ಲಿ ಸಾವಯವ ಕೃಷಿ.

35. ತೆಂಗುಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ.

36. ಶೀಥಲ ಗೃಹಗಳ ಸಹಾಯಧನ.

37. ಪ್ರಚಾರ ಮತ್ತು ಸಾಹಿತ್ಯ.

38. ರೈತರಿಗೆ ಸಹಾಯ.

39. ರೈತರಿಗೆ ತರಬೇತಿ.

40. ಮಂಡಲ ನರ್ಸರಿಗಳ ಅಭಿವೃದ್ಧಿ.

ಆ) ವಿವರಗಳನ್ನು ಅನುಬಂಧ 1 ರಲ್ಲಿ ಒದಗಿಸಿದೆ.

ಇ) ಒಟ್ಟು 1871 ಸಂಖ್ಯೆಯ ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ. ವಿವರಗಳನ್ನು ಅನುಬಂಧ–11 ರಲ್ಲಿ ಒದಗಿಸಿದೆ.

ಕೃಷಿ ಇಲಾಖೆಯಲ್ಲಿನ ಯೋಜನೆಗಳು

344 (546) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :– ಮಾನ್ಯ ಕೃಷಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ 2008–09 ರಿಂದ 2010–11 ರವರೆಗೆ ಕೃಷಿ ಇಲಾಖೆಯಲ್ಲಿ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳು ಯಾವುವು ?

ಆ) ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು ?

ಇ) ಯಾವ ಯೋಜನೆಯಲ್ಲಿ ಎಷ್ಟೆಷ್ಟು ಫಲಾನುಭವಿಗಳಿಗೆ ಸೌಲಭ್ಯ ನೀಡಿದೆ (ಫಲಾನುಭವಿಗಳ ಮತ್ತು ಖರ್ಚಾಗಿರುವ ಅನುದಾನ ಯೋಜನೆವಾರು ವಿವರ ನೀಡುವುದು) ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):–

ಅ) ಅನುಬಂಧ–1ರಲ್ಲಿ ಲಗತ್ತಿಸಿದೆ.

ಆ) ಅನುಬಂಧ–2ರಲ್ಲಿ ಲಗತ್ತಿಸಿದೆ.

ಇ) ಅನುಬಂಧ–2ರಲ್ಲಿ ಲಗತ್ತಿಸಿದೆ.